**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಎಡಿಎಂ 2(2) ಎಸ್‌ಎಟಿಎಸ್/ವಿ.ವೇ.ಮಾ/01/2017-18 ದಿನಾಂಕ: 23/06/2018

**ಜ್ಞಾಪನ**

ವಿಷಯ: 2018-19ನೇ ಸಾಲಿನಲ್ಲಿ ಎಸ್.ಎ.ಟಿ.ಎಸ್. ಮೂಲಕ ವಿದ್ಯಾರ್ಥಿ ವೇತನದ ಮಾಹಿತಿಯ ಮಾರ್ಗಸೂಚಿ.

ಉಲ್ಲೇಖ: ಅಪರ ಮುಖ್ಯ ಕಾರ್ಯದರ್ಶಿಗಳು, ಡಿ.ಪಿ.ಎ.ಆರ್.(ಇ-ಆಡಳಿತ)ರವರ ಪತ್ರ ಸಂಖ್ಯೆ: ಡಿಪಿಎಆರ್(ಇ-ಆಡಳಿತ)167 ಎಸಿಎಸ್2018 ದಿನಾಂಕ: 04.06.2018.

★★★★★

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2018-19ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಫಲಾನುಭವಿಗಳಿಗೆ ಎಸ್.ಎ.ಟಿ.ಎಸ್. ಮೂಲಕ ವಿದ್ಯಾರ್ಥಿವೇತನವನ್ನು ವಿತರಿಸಲು ಸರ್ಕಾರದ ಹಂತದಲ್ಲಿ ಇಲಾಖೆ ನಿರ್ಧರಿಸಿರುತ್ತದೆ. ಇ-ಆಡಳಿತ ಇಲಾಖೆ ಲಭ್ಯವಿರುವ ಎಲ್ಲಾ ಇಲಾಖೆಗಳ ಅಂದರೆ ಸಮಾಜಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಬುಡಕಟ್ಟು ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳ State Scholarship Portal (SSP) ಮುಖಾಂತರ ಆಧಾರ್ ಹೊಂದಾಣಿಕೆಯ Direct Benefit Transfer ವ್ಯವಸ್ಥೆ ಪೂರ್ವ ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿವೇತನದ ಪಾವತಿ ಜಾರಿಯಲ್ಲಿರುತ್ತದೆ.

ಎಸ್.ಎ.ಟಿ.ಎಸ್. ಮೂಲಕ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಎಸ್.ಎ.ಟಿ.ಎಸ್ ಸಂಖ್ಯೆ, ವಿದ್ಯಾರ್ಥಿಯ ಆಧಾರ್ ಸಂಖ್ಯೆ, ತಂದೆ/ತಾಯಿಯ ಆಧಾರ್ ಸಂಖ್ಯೆ, ಜಾತಿ/ಆದಾಯ ಪ್ರಮಾಣ ಪತ್ರ ಸಂಖ್ಯೆಯನ್ನು ಕಡ್ಡಾಯವಾಗಿ ವಿದ್ಯಾರ್ಥಿಯ ಮಾಹಿತಿಯಲ್ಲಿ ತುಂಬುವುದು ಮುಖ್ಯಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ನೇರವಾಗಿ ಇ-ಆಡಳಿತ ಇಲಾಖೆಯಿಂದ ಸದರಿ ಮಾಹಿತಿಯನ್ನು ವಿದ್ಯಾರ್ಥಿ ವೇತನಕ್ಕೆ ಬಳಸಿಕೊಳ್ಳಲಾಗುವುದು ಆದ್ದರಿಂದ ಮಾಹಿತಿಯನ್ನು ಖುದ್ದಾಗಿ ಆಧಾರ್ ಸಂಖ್ಯೆ, ಜಾತಿ/ಆದಾಯ ಪ್ರಮಾಣ ಪತ್ರ ಸಂಖ್ಯೆಯನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ತುಂಬುವುದು. ಸಿ.ಸಿ.ಇ ಹಾಗೂ ಹಾಜರಾತಿ ಕಳೆದ ಸಾಲಿನ ಮಾಹಿತಿಯಂತೆ ಪೂರ್ಣವಾಗಿರಬೇಕು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ತಲುಪುವಲ್ಲಿ ಲೋಪವಾದಲ್ಲಿ ಅಥವಾ ಬಿಟ್ಟು ಹೋದಲ್ಲಿ ನೇರವಾಗಿ ಮುಖ್ಯಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು

ಎಸ್.ಎ.ಟಿ.ಎಸ್.ನಲ್ಲಿ ದಾಖಲು ಮಾಡುವ ಶಾಲಾ ಮಾಹಿತಿ, ವಿದ್ಯಾರ್ಥಿಗಳ ಮಾಹಿತಿ, ಶಿಕ್ಷಕರ ಮಾಹಿತಿಯ ಗೌಪ್ಯತೆ, ನೈಜತೆ ಹಾಗೂ ಪರಿಪೂರ್ಣತೆಯ ಸಂಪೂರ್ಣ ಹೊಣೆ ಮುಖ್ಯಶಿಕ್ಷಕರಾಗಿರುತ್ತದೆ. ವಿದ್ಯಾರ್ಥಿಗಳ ಎಸ್.ಎ.ಟಿ.ಎಸ್. ಸಂಖ್ಯೆಯನ್ನು ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸುವುದು ಕಡ್ಡಾಯವಾಗಿರುತ್ತದೆ.

ವಿದ್ಯಾರ್ಥಿವೇತನ ಅರ್ಜಿ ಸಲ್ಲಿಸುವ ಪ್ರಕ್ರಿಯೆ, ವಿದ್ಯಾರ್ಥಿವೇತನದ ವಿವರಗಳು, ವಿದ್ಯಾರ್ಥಿವೇತನ ಸಲ್ಲಿಸಲು ಆರಂಭ ಮತ್ತು ಇತರೆ ಅಗತ್ಯ ವಿದ್ಯಾರ್ಥಿವೇತನ ಸಲ್ಲಿಸುವ ವಿವರಗಳನ್ನು ಪ್ರತ್ಯೇಕವಾಗಿ ಸಂಬಂಧಿಸಿದ ಇಲಾಖೆ ನೀಡಲಿದೆ.

ಎಸ್.ಎ.ಟಿ.ಎಸ್.ನಲ್ಲಿ ಆನ್‌ಲೈನಲ್ಲಿ ಮಾಹಿತಿಯನ್ನು ಉಪನಿರ್ದೇಶಕರು(ಆಡಳಿತ)ರವರು ರಾಜ್ಯ ಪಠ್ಯಕ್ರಮ, ಸಿ.ಬಿ.ಎಸ್.ಸಿ ಪಠ್ಯಕ್ರಮ, ಐ.ಸಿ.ಎಸ್.ಸಿ ಪಠ್ಯಕ್ರಮ ಶಾಲೆಗಳು ಹಾಗೂ ಸರ್ಕಾರಿ, ಅನುದಾನಿತ, ಅನುದಾನರಹಿತ ಎಲ್ಲಾ ಮಂಡಳಿಗಳ ಶಾಲೆಗಳ ಮಾಹಿತಿ ದಿನಾಂಕ: 27.06.2018ರೊಳಗೆ ಪೂರ್ಣಗೊಂಡಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:-

1. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ,ಸಾರ್ವಜನಿಕ ಶಿಕ್ಷಣ ಇಲಾಖೆ
2. ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ,ಸಾರ್ವಜನಿಕ ಶಿಕ್ಷಣ ಇಲಾಖೆ
3. ಪ್ರಾಂಶುಪಾಲರು/ಉಪ ಪ್ರಾಂಶುಪಾಲರು/ಮುಖ್ಯಶಿಕ್ಷಕರು - ಸರ್ಕಾರಿ, ಅನುದಾನಿತ, ಅನುದಾನರಹಿತ

ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ,

1. ಪ್ರಧಾನ ಕಾರ್ಯದರ್ಶಿಗಳ ಆಪ್ತ ಶಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ
4. ಆಯುಕ್ತರ ಕಛೇರಿ ಆಪ್ತ ಶಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು ,ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ
6. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ
7. ನಿರ್ದೇಶಕರು, ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ
8. ಸಹನಿರ್ದೇಶಕರು, ಬೆಂಗಳೂರು,ಮೈಸೂರು,ಧಾರವಾಡ, ಕಲಬುರಗಿ ವಿಭಾಗ, ಸಾ.ಶಿ.ಇಲಾಖೆ
9. ಕಛೇರಿ ಪ್ರತಿ